23

ಇಲಾಖೆ / ವಿಷಯ : DEPARTMENT / SUBJECT: ಇತರ ರಾಜ್ಯಗಳ ಮಾಹಿತಿ

ಪತ್ರಿಕೆಯ ಹೆಸರು : NAME OF THE NEWS PAPER: ಉದಯವಾಣಿ

ದಿನಾಂಕ : DATE : 19/2/2021

# 22ಕ್ಕೆ ನಾರಾಯಣ ಸ್ವಾಮಿಗೆ ಅಗ್ನಿಪರೀಕ್ಷೆ

ಉವಾ 19/2/21

**ಪುದುಚೆರಿ:** ಅಲ್ಪಮತಕ್ಕೆ ಕುಸಿದಿರುವ ಪುದುಚ್ಚೇರಿ ಮುಖ್ಯಮಂತ್ರಿ ನಾರಾಯಣ ಸ್ವಾಮಿಯವರ ಸರ್ಕಾರ ಫೆ. 22ರಂದು ಸದನದಲ್ಲಿ ಬಹುಮತ ಸಾಬೀತುಪಡಿಸುವಂತೆ ಅಲ್ಲಿನ ಲೆಫ್ಟನೆಂಟ್ ಗವರ್ನರ್ ತಮಿಳ್ಸಾಯಿ ಸೌಂದರ್‌ರಾಜನ್ ನಾರಾ ಯಣ ಸ್ವಾಮಿಯವರಿಗೆ ಆದೇಶಿಸಿದ್ದಾರೆ. ಬಹುಮತ ಯಾಚನೆಗಾಗಿ ಕರೆಯಲಾಗುರುವ ವಿಧಾನಸಭೆ ಅಧಿವೇಶನವನ್ನು ಪೂರ್ಣವಾಗಿ ವಿಡಿಯೋಗ್ರಫಿ ಮಾಡಲಾಗುತ್ತದೆ. ವಿಶ್ವಾಸಮತದ ಮೇಲೆ ಸರ್ಕಾರದ ಪರವಾಗಿ ಅಥವಾ ವಿರೋಧವಾಗಿ ಶಾಸಕರು ತಮ್ಮ ಕೈ ಎತ್ತಬೇಕಿದ್ದು ಅದನ್ನೇ ಮತ ಗಳನ್ನಾಗಿ ಪರಿಗಣಿಸಲು ನಿರ್ಧರಿಸಲಾಗಿದೆ. ಬುಧವಾರದಂದು, ವಿಪಕ್ಷ ನಾಯಕರ ನಿಯೋಗವೊಂದು ರಾಜಭವನಕ್ಕೆ ಭೇಟಿ ನೀಡಿ, ನಾರಾಯಣ ಸ್ವಾಮಿಯವರ ಸರ್ಕಾರಕ್ಕೆ ಬಹುಮತ ಸಾಬೀತುಪಡಿಸುವಂತೆ ಸೂಚನೆ ನೀಡಬೇಕೆಂದು ಕೋರಿ ಮನವಿ ಪತ್ರ ಸಲ್ಲಿಸಿತ್ತು.

**ಅಧಿಕಾರ ಸ್ವೀಕಾರ:** ತೆಲಂಗಾಣ ರಾಜ್ಯಪಾಲರಾದ ತಮಿಳ್ಸಾಯಿ ಸೌಂದರ್‌ರಾಜನ್ ಅವರು, ಪುದುಚೆರಿಯ ನೂತನ ಲೆಫ್ಟನೆಂಟ್ ಗವರ್ನರ್ ಆಗಿ (ಹೆಚ್ಚುವರಿ ಹೊಣೆಗಾರಿಕೆ) ಗುರುವಾರ ಅಧಿಕಾರ ಸ್ವೀಕರಿಸಿದರು.